**ದ್ವಿತೀಯ, ತೃತೀಯ ಹಾಗೂ ನಾಲ್ಕನೇ ಪ್ರತಿ ಅಂಕಪಟ್ಟಿ**

ವಿದ್ಯಾರ್ಥಿಗಳು ಅನಿವಾರ್ಯ ಕಾರಣಗಳಿಂದ ಮೊದಲನೆ ಅಂಕಪಟ್ಟಿಯನ್ನು ಕಳೆದುಕೊಂಡಲ್ಲಿ ಇಲ್ಲವೇ ಅಂಕಪಟ್ಟಿ ಹಾಳಾಗಿದ್ದಲ್ಲಿ (ಹರಿದಿರುವುದು ಅಥವಾ ಸುಟ್ಟಿರುವುದು), ಅಂಥಹ ವಿದ್ಯಾರ್ಥಿಗಳು ಮಂಡಳಿಗೆ ಸೂಕ್ತ ದಾಖಲೆಗಳೊಂದಿಗೆ ಅರ್ಜಿಸಲ್ಲಿಸಿದಲ್ಲಿ ಅಂಥಹ ವಿದ್ಯಾರ್ಥಿಗಳಿಗೆ ಅವರ ಮುಂದಿನ ಭವಿಷ್ಯದ ದೃಷ್ಠಿಯಿಂದ ಮಂಡಳಿಯು ದ್ವಿತೀಯ, ತೃತೀಯ ಹಾಗೂ ನಾಲ್ಕನೇ ಪ್ರತಿ ಅಂಕಪಟ್ಟಿಗಳನ್ನು ಸೂಕ್ತ ದಾಖಲೆಗಳನ್ನು ಪಡೆದು ಷರತ್ತಿನ ಮೇಲೆ ವಿತರಿಸಲು ಕ್ರಮವಹಿಸುವುದು.

**ದ್ವಿತೀಯ, ತೃತೀಯ ಹಾಗೂ ನಾಲ್ಕನೇ ಪ್ರತಿ ಅಂಕಪಟ್ಟಿ ಪಡೆಯಲು ಅರ್ಜಿ ನಿಗದಿಪಡಿಸಲಾಗಿದೆ. ಇದು ಎಲ್ಲಾ ಅಧಿಕೃತ ಶಾಲೆಗಳಲ್ಲೂ ದೊರೆಯುತ್ತದೆ. ಅರ್ಜಿಗೆ ಯಾವುದೇ ಶುಲ್ಕ ಇರುವುದಿಲ್ಲ.**

**ಅರ್ಜಿಯಲ್ಲಿ ವಿದ್ಯಾರ್ಥಿ ಭರ್ತಿ ಮಾಡಬೇಕಾದ ಅಂಕಣ :**

**ವಿದ್ಯಾರ್ಥಿಯು ಕೋರುತ್ತಿರುವ ದಾಖಲೆ :** ನೀವು ಯಾವ ದಾಖಲೆಯನ್ನು ಕೋರುತ್ತಿದ್ದೀರಿ ಎಂದು ಸ್ಪಷ್ಟವಾಗಿ ಅರ್ಜಿಯಲ್ಲಿ ಬರೆಯಬೇಕು.

**ಬ್ಯಾಂಕ್ ಹುಂಡಿಯ ವಿವರ :** ನೀವು ಪಡೆದಿರುವ ಬ್ಯಾಂಕ್ ಹುಂಡಿಯ ಸಂಖ್ಯೆ,ದಿನಾಂಕ,ಮೊತ್ತ, ಬ್ಯಾಂಕ್ ಹೆಸರು ಹಾಗೂ ಮೊತ್ತವನ್ನು ಅರ್ಜಿಯಲ್ಲಿ ಬರೆದು ಹುಂಡಿಯ ಹಿಂಬಾಗದಲ್ಲಿ ತಮ್ಮ ಹೆಸರು,ವಿಳಾಸ ಹಾಗೂ ಯಾವ ಉದ್ದೇಶಕ್ಕಾಗಿ ಹುಂಡಿಯನ್ನು ಪಡೆದಿದ್ದೀರಿ ಎಂಬ ಬಗ್ಗೆ ನಮೂದಿಸಬೇಕು

**ವಿದ್ಯಾರ್ಥಿಯ ವಿವರ :** ವಿದ್ಯಾರ್ಥಿಯು ತನ್ನ ಹೆಸರು,ತಂದೆ,ತಾಯಿಯ ಹೆಸರು ,ಜನ್ಮದಿನಾಂಕ,ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಓದಿದ ಭಾಷೆಗಳು ಹಾಗೂ ವಿಷಯಗಳು, ದಾಖಲೆಗಳಲ್ಲಿರುವಂತೆ ಬರೆದು ದಾಖಲೆ ಪಡೆಯುತ್ತಿರುವ ಉದ್ದೇಶ ಹಾಗೂ ಪೂರ್ಣ ಅಂಚೆ ವಿಳಾಸವನ್ನು ಬರೆದಿರಬೇಕು.

ಅರ್ಜಿ ತುಂಬಿದ ನಂತರ ಮಾಹಿತಿ ಸರಿಯಾಗಿದೆ ಎಂದು ವಿದ್ಯಾರ್ಥಿ ಸಹಿ ಮಾಡಬೇಕು ಇದು ಕಡ್ಡಾಯ

**ಶಾಲೆಯ ಮುಖ್ಯಸ್ಥರು ಭರ್ತಿ ಮಾಡಬೇಕಾದ ಅಂಕಣ ;**

**ಸಂಸ್ಥೆಯ ಮುಖ್ಯಸ್ಥರು ನೀಡಬೇಕಾದ ಮಾಹಿತಿ :** ಶಾಲೆಯ ಹೆಸರು, ಶಾಲಾ ಸಂಕೇತ, ವಿದ್ಯಾರ್ಥಿಯ ನೋಂದಣಿಸಂಖ್ಯೆ ಹಾಗೂ ಯಾವ ವರ್ಷ/ಗಳಲ್ಲಿ ಉತ್ತೀರ್ಣನಾಗಿರುತ್ತಾನೆ/ಳೆ ಎಂಬ ಬಗ್ಗೆ ಫಲಿತಾಂಶ ಪಟ್ಟಿಗಳನ್ನು ಪರಿಶೀಲಿಸಿ ಮಾಹಿತಿ ದಾಖಲಿಸಬೇಕು.

**ಅರ್ಜಿ ತುಂಬಿದ ನಂತರ ಮಾಹಿತಿ ಸರಿಯಾಗಿದೆ ಎಂದು ಶಾಲೆಯ ಮುಖ್ಯಸ್ಥರು ಮೊಹರಿನೊಂದಿಗೆ ಸಹಿ ಮಾಡಬೇಕು ಇದು ಕಡ್ಡಾಯ.**

**ಅಂಕಪಟ್ಟಿ ಕಳೆದುಹೋದಾಗ :** ಅಂಕ ಪಟ್ಟಿ ಕಳೆದು ಹೋದ ಬಗ್ಗೆ 20 ರೂ ಛಾಪಾ ಕಾಗದದ ಅಫಿಡವಿಟ್ ಅನ್ನು ನೋಟರಿಯಿಂದ ದೃಢೀಕರಿಸಿ ನೀಡಬೇಕು.

**ಅಂಕಪಟ್ಟಿ ಹಾಳಾದಾಗ :** ಅಂಕಪಟ್ಟಿ ಹರಿದು ಹೋದ ಇಲ್ಲವೇ ಭಾಗಶಃ ಸುಟ್ಟುಹೋಗಿದ್ದಲ್ಲಿ ಅಂಕಪಟ್ಟಿಯನ್ನು ಅರ್ಜಿಯೊಂದಿಗೆ ಲಗತ್ತಿಸಬೇಕು. ಇಂತಹ ಸಂದರ್ಬದಲ್ಲಿ ಅಫಿಡವಿಟ್ ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ. ಆದರೆ ಅಂಕಪಟ್ಟಿ ಪೂರ್ಣವಾಗಿ ಸುಟ್ಟುಹೋದ ಸಂದರ್ಬದಲ್ಲಿ 20 ರೂ ಛಾಪಾಕಾಗದದ ಮೇಲೆ ಅಂಕಪಟ್ಟಿ ಹೇಗೆ ಹಾಳಾಯಿತು ಎಂಬ ಬಗ್ಗೆ ನೋಟರಿಯಿಂದ ಅಫಿಡವಿಟ್ ನೀಡಬೇಕು.

**2. ಶುಲ್ಕ**

**ಕೇಂದ್ರ ಕಛೇರಿಗೆ ಅರ್ಜಿಸಲ್ಲಿಸುವಾಗ** : ರೂ.500/– ರೂಗಳಿಗೆ ರಾಷ್ಟ್ರೀಕೃತ ಬ್ಯಾಂಕಿನಲ್ಲಿ "Secretary,KSEEB,Bangalore" ಎಂದು ಹುಂಡಿಯನ್ನು ಪಡೆದು ಅರ್ಜಿ ಜೊತೆಗೆ ಸಲ್ಲಿಸಬೇಕು. Bangalore Payable ಹುಂಡಿಯಾಗಿರಬೇಕು. ಅತಿ ತುರ್ತಾಗಿ ಅಂಕಪಟ್ಟಿ ಪಡೆಯಬೇಕಾದಲ್ಲಿ ವಿಶೇಷ ಪ್ರಕರಣದಡಿ ರೂ.1000/– ಶುಲ್ಕ ಪಾವತಿಸಬೇಕು.

**ವಿಭಾಗೀಯ ಕಛೇರಿಗೆ ಅರ್ಜಿಸಲ್ಲಿಸುವಾಗ** : ರೂ.500/– ರೂಗಳಿಗೆ ರಾಷ್ಟ್ರೀಕೃತ ಬ್ಯಾಂಕಿನಲ್ಲಿ "Secretary,KSREEB,Bangalore" ಎಂದು ಹುಂಡಿಯನ್ನು ಪಡೆದು ಅರ್ಜಿ ಜೊತೆಗೆ ಸಲ್ಲಿಸಬೇಕು. ಅತಿ ತುರ್ತಾಗಿ ಅಂಕಪಟ್ಟಿ ಪಡೆಯಬೇಕಾದಲ್ಲಿ ವಿಶೇಷ ಪ್ರಕರಣದಡಿ ರೂ.1000/– ಶುಲ್ಕ ಪಾವತಿಸಬೇಕು.

**ಮಂಡಳಿ ಸುತ್ತೋಲೆ ಎ8/ ದ್ವಿ.ಪ್ರ.ಅಂ/ ಫ.ಪಲಿ/ 2007–08 ದಿನಾಂಕ 26.4.2008**

ಅರ್ಜಿಯನ್ನು ಯಾವ ಕಛೇರಿಗೆ ಸಲ್ಲಿಸುವುದು

1. **ಪ್ರಸ್ತುತ ವರ್ಷದಲ್ಲಿ ವಿದ್ಯಾರ್ಥಿ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತೀರ್ಣನಾಗಿದ್ದರೆ :**
   ಪ್ರಸ್ತುತ ವರ್ಷದಲ್ಲಿ ವಿದ್ಯಾರ್ಥಿ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತೀರ್ಣನಾಗಿದ್ದು ಆ ವರ್ಷದಲ್ಲಿಯೇ ನವೆಂಬರ್ ಮಾಹೆಯೊಳಗೆ ಅಂಕಪಟ್ಟಿಯ ಪ್ರತಿ ಪಡೆಯಲು ಬಯಸಿದಲ್ಲಿ, ವಿದ್ಯಾರ್ಥಿಯು ಎಸ್.ಎಸ್.ಎಲ್.ಸಿ ವಿದ್ಯಾಭ್ಯಾಸ ಮಾಡಿದ ಶಾಲೆಯ ಮುಖ್ಯಶಿಕ್ಷಕರ ಮೂಲಕ ಅರ್ಜಿಯನ್ನು ಅಗತ್ಯ ದಾಖಲೆಗಳೊಂದಿಗೆ ಪರೀಕ್ಷಾಮಂಡಳಿಯ ಕೇಂದ್ರ ಕಛೇರಿಗೆ ಕಳುಹಿಸಬೇಕು. ಇಲ್ಲವಾದಲ್ಲಿ ಅರ್ಜಿಯನ್ನು ವಿಭಾಗೀಯ ಪರೀಕ್ಷಾ ಮಂಡಳಿಗೆ ಸಲ್ಲಿಸಬೇಕು.

2. **1963 ಹಾಗೂ ಹಿಂದಿನ ವರ್ಷಗಳಲ್ಲಿ ವಿದ್ಯಾರ್ಥಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣನಾಗಿದ್ದರೆ :**
   1963 ಹಾಗೂ ಹಿಂದಿನವರ್ಷಗಳಲ್ಲಿ ವಿದ್ಯಾರ್ಥಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣನಾಗಿದ್ದು_ಅಂಕಪಟ್ಟಿಯ ಪ್ರತಿ ಪಡೆಯಲು ಬಯಸಿದಲ್ಲಿ ಅಂತಹ ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ ವಿದ್ಯಾಭ್ಯಾಸ ಮಾಡಿದ ಶಾಲೆಯ ಮುಖ್ಯಶಿಕ್ಷಕರ ಮೂಲಕ ಅರ್ಜಿಯನ್ನು ಅಗತ್ಯ ದಾಖಲೆಗಳೊಂದಿಗೆ ಪರೀಕ್ಷಾಮಂಡಳಿಯ ಕೇಂದ್ರ ಕಛೇರಿಗೆ ಕಳುಹಿಸಬೇಕು.

3. **1963 ರ ನಂತರದ ವರ್ಷಗಳಲ್ಲಿ ವಿದ್ಯಾರ್ಥಿ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತೀರ್ಣನಾಗಿದ್ದರೆ :**
   1963 ರ ನಂತರದ ವರ್ಷಗಳಲ್ಲಿ ವಿದ್ಯಾರ್ಥಿ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತೀರ್ಣನಾಗಿದ್ದು ಅಂಕಪಟ್ಟಿಯ ಪ್ರತಿ ಪಡೆಯಲು ಬಯಸಿದಲ್ಲಿ ವಿದ್ಯಾರ್ಥಿಯು ಎಸ್.ಎಸ್.ಎಲ್.ಸಿ ವಿದ್ಯಾಭ್ಯಾಸ ಮಾಡಿದ ಶಾಲೆಯ ಮುಖ್ಯಶಿಕ್ಷಕರ ಮೂಲಕ ಅರ್ಜಿಯನ್ನು ಅಗತ್ಯ ದಾಖಲೆಗಳೊಂದಿಗೆ ಸಂಬಂಧಿಸಿದ ವಿಭಾಗೀಯ ಪರೀಕ್ಷಾಮಂಡಳಿಗೆ ಕಳುಹಿಸಿಬೇಕು.

**ಸೇವೆ ನೀಡಲು ಕಾಲ ಮಿತಿ**

1. ಸಾಮಾನ್ಯ ಪ್ರಕರಣಗಳಿಗೆ 30 ದಿನಗಳು.
2. ವಿಶೇಷ ಪ್ರಕರಣಗಳಿಗೆ 5 ದಿನಗಳು.

**: ಅಂಕಪಟ್ಟಿ ಪ್ರತಿಯನ್ನು ರವಾನಿಸುವ ಬಗೆ :**

ತುರ್ತು ಅಂಚೆ ಮೂಲಕ ಶಾಲೆಗೆ ರವಾನಿಸಲಾಗುವುದು. ಶಾಲೆಯ ಮುಖ್ಯಶಿಕ್ಷಕರಿಂದ ವಿದ್ಯಾರ್ಥಿಯು ಅಂಕಪಟ್ಟಿಯನ್ನು ಪಡೆದುಕೊಳ್ಳಬೇಕು.  ಯಾವುದೇ ಕಾರಣಕ್ಕೂ ವಿದ್ಯಾರ್ಥಿಗೆ ಅಂಕಪಟ್ಟಿಯನ್ನು ನೇರವಾಗಿ ಮಂಡಳಿಯಿಂದ ವಿತರಿಸಲಾಗುವುದಿಲ್ಲ.

**: ಶಾಲೆಯಲ್ಲಿ ಅಂಕಪಟ್ಟಿ ಪ್ರತಿಯನ್ನು ವಿತರಿಸುವ ಬಗೆ :**

ಮಂಡಳಿಯಿಂದ ಅಂಕಪಟ್ಟಿಯ ಪ್ರತಿ ಬಂದ ನಂತರ “ಇಂದ” ವಹಿಯಲ್ಲಿ ನೋಂದಣಿ ಮಾಡಿಕೊಳ್ಳಬೇಕು. ಫಲಿತಾಂಶ ಪಟ್ಟಿಯಲ್ಲಿ ಆ ವಿದ್ಯಾರ್ಥಿಯ ಮುಂದೆ ಎಷ್ಟನೇ ಪ್ರತಿಯನ್ನು ಯಾವದಿನಾಂಕದಂದು ವಿತರಿಸಲಾಗಿದೆ ಎಂಬ ಬಗ್ಗೆ ನಮೂದಿಸಿಕೊಳ್ಳಬೇಕು. ಮೂಲ ಅಂಕಪಟ್ಟಿ ವಿತರಣಾ ವಹಿಯಲ್ಲಿ ಆ ವಿದ್ಯಾರ್ಥಿಗೆ ಈ ಹಿಂದೆ ಅಂಕಪಟ್ಟಿ ವಿತರಿಸಿದ ಪುಸ್ತಕದಲ್ಲಿಯೇ ವಿದ್ಯಾರ್ಥಿಯ ಸಹಿಯನ್ನು ಪಡೆಯಬೇಕು.

**ಅಫಿಡವಿಟ್ ಮಾದರಿ**

ವಿದ್ಯಾರ್ಥಿಪೂರ್ಣ ಹೆಸರು……………….. ತಂದೆ …………….. ಆದ ನಾನು ………ಸಾಲಿನಲ್ಲಿ ……………….…ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿದ್ದು ನನ್ನ ನೋಂದಣಿ ಸಂಖ್ಯೆ…………….. ರಂತೆ ಎಸ್.ಎಸ್.ಎಲ್.ಸಿ ಪರೀಕ್ಷೆ ಬರೆದು ……………..ದರ್ಜೆಯಲ್ಲಿ ಉತ್ತೀರ್ಣನಾಗಿರುತ್ತೇನೆ. ಪ್ರಸ್ತುತ ...(ಪೂರ್ಣ ಅಂಚೆ ವಿಳಾಸ) …...………………ವಿಳಾಸದಲ್ಲಿ ವಾಸವಾಗಿದ್ದೇನೆ.

ನನ್ನ ಅಂಕಪಟ್ಟಿಯು …………………………… ……………..ಸಂದರ್ಬದಲ್ಲಿ ಕಳೆದುಹೋಗಿದೆ/ನಾಶವಾಗಿದೆ. ಆದ್ದರಿಂದ ನನಗೆ ……………………...ಕಾರಣಕ್ಕಾಗಿ ಅಂಕಪಟ್ಟಿಯ ಅವಶ್ಯಕತೆ ಇದ್ದು …………………..ಪ್ರತಿ ಅಂಕಪಟ್ಟಿಯನ್ನು ವಿತರಿಸಬೇಕೆಂದು ಈ ಮೂಲಕ ಕೋರುತ್ತೇನೆ.

ಮೇಲೆ ಹೇಳಿರುವ ಎಲ್ಲಾ ಅಂಶಗಳು ಸತ್ಯವೆಂದು , ಒಂದುವೇಳೆ ಮೂಲ/ದ್ವಿತೀಯ/ತೃತೀಯ ಪ್ರತಿ ಅಂಕಪಟ್ಟಿ ಸಿಕ್ಕಿದಲ್ಲಿ ಅದನ್ನು ಮಂಡಳಿಗೆ ಹಿಂದಿರುಗಿಸುತ್ತೇನೆ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ವಂದನೆಗಳೊಂದಿಗೆ
ತಮ್ಮ ನಂಬುಗೆಯ

ವಿದ್ಯಾರ್ಥಿ ಸಹಿ ಮತ್ತು ಹೆಸರು

ತಿದ್ದುಪಡಿಗಳ ಸಂಖ್ಯೆ–

## :: ಅಂಕಪಟ್ಟಿ ತಿದ್ದುಪಡಿ ::

ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಅರ್ಜಿ ಸಲ್ಲಿಸುವಾಗ ವಿದ್ಯಾರ್ಥಿಗಳ ಮಾಹಿತಿಯನ್ನು ಶಾಲಾ ದಾಖಲಾತಿವಹಿಯಲ್ಲಿರುವಂತೆ ಕಳಿಸಬೇಕೆಂಬ ಸೂಚನೆಯನ್ನು ಮಂಡಳಿ ಎಲ್ಲಾ ಶಾಲಾ ಮುಖ್ಯಸ್ಥರಿಗೆ ನೀಡಿರುತ್ತದೆ. ಆದರೂ ಕೆಲವು ಶಾಲಾ ಮುಖ್ಯಶಿಕ್ಷಕರು ತಪ್ಪಾಗಿ ಮಾಹಿತಿ ರವಾನಿಸಿರುತ್ತಾರೆ. ಇಂತಹ ತಪ್ಪುಗಳನ್ನು ಸರಿಪಡಿಸಿಕೊಳ್ಳಲು ಅಂಕಪಟ್ಟಿ ವಿತರಣೆಯವರೆಗೂ ಸಾಕಷ್ಟು ಅವಕಾಶಗಳನ್ನು ನೀಡಿದಾಗಲೂ ತಿದ್ದುಪಡಿಮಾಡಿಸಿಕೊಳ್ಳದಿದ್ದಾಗ ಅಂಕಪಟ್ಟಿಯಲ್ಲಿ ಮಾಹಿತಿಗಳು ತಪ್ಪಾಗಿ ಮುದ್ರಿತವಾಗಿರುತ್ತವೆ.

ಮಂಡಳಿಯಿಂದ ಅಂಕಪಟ್ಟಿಗಳನ್ನು ಶಾಲೆಗಳಿಗೆ ವಿತರಿಸಿದ ನಂತರ ಪ್ರಮಾಣಪತ್ರದಲ್ಲಿ ದೋಷಗಳಿದ್ದಲ್ಲಿ ಮುಖ್ಯಶಿಕ್ಷಕರು ಪರಿಶೀಲಿಸಿಕೊಂಡು ತಿದ್ದುಪಡಿಗಾಗಿ 15 ದಿನಗಳೊಳಗೆ ಸೂಕ್ತ ದಾಖಲೆಗಳೊಂದಿಗೆ ನಿಯಮಾನುಸಾರ ದಂಡಶುಲ್ಕ ಪಾವತಿಸಿ ತಿದ್ದುಪಡಿ ಮಾಡಿಸಿಕೊಳ್ಳಲು ಅವಕಾಶ ನೀಡಲಾಗಿರುತ್ತದೆ.

ನವೆಂಬರ್ ಮಾಹೆಯ ನಂತರ ಸಂಪುಟಗಳನ್ನು ಸಂಬಂಧಿಸಿದ ವಿಭಾಗೀಯ ಕಾರ್ಯದರ್ಶಿಗಳ ಕಛೇರಿಗಳಿಗೆ ರವಾನಿಸಿದ ನಂತರ ಯಾವುದೇ ತಿದ್ದುಪಡಿಗಳನ್ನು ಮಂಡಳಿಯ ಕೇಂದ್ರ ಕಛೇರಿಯಲ್ಲಿ ಮಾಡಲಾಗುವುದಿಲ್ಲ.

## ತಿದ್ದುಪಡಿಗಳ ವಿಧ

1. ಶಾಲಾ ದಾಖಲಾತಿವಹಿಯಲ್ಲಿ ಮಾಹಿತಿ ಸರಿಇದ್ದು ಶಾಲಾ ಹಂತದಿಂದ ಮಂಡಳಿಗೆ ತಪ್ಪು ಮಾಹಿತಿ ನೀಡಿರುವುದು :

| ತಿದ್ದುಪಡಿ | ದಾಖಲೆಗಳು | ತಿದ್ದುಪಡಿಶುಲ್ಕ(ವಿಭಾಗೀಯ ಕಛೇರಿಗಳಲ್ಲಿ ಮಾತ್ರ) | ದಂಡಶುಲ್ಕ |
|---|---|---|---|
| ವಿದ್ಯಾರ್ಥಿಯ ಹೆಸರು /ತಂದೆ/ತಾಯಿಹೆಸರಿನಲ್ಲಿ ಸಣ್ಣಸ್ಪೆಲ್ಲಿಂಗ್ ದೋಷಗಳಿದ್ದಲ್ಲಿ, | ಎಸ್ಎಸ್ಎಲ್ಸಿ ಮೂಲ ಅಂಕಪಟ್ಟಿ, ಉಪನಿರ್ದೇಶಕರಿಂದ ದೃಢೀಕರಿಸಿದ ದಾಖಲಾತಿವಹಿಯ ಉದ್ಧೃತ ಭಾಗ ಹಾಗೂ ಉಪನಿರ್ದೇಶಕರ ಜ್ಞಾಪನ | ರೂ.100/- | ಪ್ರತಿತಪ್ಪಿಗೆ ರೂ.100/-ರಂತೆ |

| | | | |
|---|---|---|---|
| ಜನ್ಮದಿನಾಂಕ ತಿದ್ದುಪಡಿ ವಿದ್ಯಾರ್ಥಿಯ ಹೆಸರು /ತಂದೆ/ ತಾಯಿಹೆಸರಿನ ಪೂರ್ಣ ತಿದ್ದುಪಡಿ. | ಎಸ್‌ಎಸ್‌ಎಲ್‌ಸಿ ಮೂಲ ಅಂಕಪಟ್ಟಿ, ಉಪನಿರ್ದೇಶಕರಿಂದ ದೃಢೀಕರಿಸಿದ ದಾಖಲಾತಿ ವಹಿಯ ಉದ್ಧೃತ ಭಾಗ ಹಾಗೂ ಉಪನಿರ್ದೇಶಕರ ಜ್ಞಾಪನ. ವಿದ್ಯಾರ್ಥಿ ಪಾಸಾದ 5 ವರ್ಷಗಳ ನಂತರದ ಪ್ರಕರನಗಳಲ್ಲಿ ವಿದ್ಯಾರ್ಥಿಯು ಯಾವುದೇ ಸರ್ಕಾರಿ ಸೇವೆಯಲ್ಲಿ ಇಲ್ಲವೆಂಬ ಬಗ್ಗೆ ತಹಸೀಲ್ದಾರರ ದೃಢೀಕರಣ ಇರಬೇಕು.(NEC-Non Employment Certificate) | ರೂ.100/– | ಪ್ರತಿ ತಿದ್ದುಪಡಿಗೆ ರೂ.1000/– |
| ಮಾಧ್ಯಮ ತಿದ್ದುಪಡಿ | ಎಸ್‌ಎಸ್‌ಎಲ್‌ಸಿ ಮೂಲ ಅಂಕಪಟ್ಟಿ | ರೂ.100/– | ರೂ.500/– |

**ಸುತ್ತೋಲೆಗಳು** :

2. ದಾಖಲಾತಿ ವಹಿಯಲ್ಲಿರುವಂತೆಯೇ ಅಂಕಪಟ್ಟಿಯಲ್ಲಿ ಮಾಹಿತಿ ಮುದ್ರಣವಾಗಿದ್ದು ಇದೀಗ ವಿದ್ಯಾರ್ಥಿ / ಪಾಲಕರು ಬದಲಾವಣೆ ಮಾಡಿಸಿಕೊಳ್ಳಲಿಚ್ಛಿಸಿದಲ್ಲಿ :

| ತಿದ್ದುಪಡಿ | ದಾಖಲೆಗಳು | ತಿದ್ದುಪಡಿಶುಲ್ಕ |
|---|---|---|
| ವಿದ್ಯಾರ್ಥಿಯ ಹೆಸರು / ತಂದೆ/ ತಾಯಿ ಹೆಸರಿನ ಪೂರ್ಣ ಬದಲಾವಣೆ, ಜನ್ಮದಿನಾಂಕ ತಿದ್ದುಪಡಿ | 1. ಕೋರ್ಟ ಆದೇಶ,<br>2. ಎಸ್‌ಎಸ್‌ಎಲ್‌ಸಿ ಮೂಲ ಅಂಕಪಟ್ಟಿ.<br>3. ನ್ಯಾಯಾಲಯದ ಡಿಕ್ರಿ<br>4. ಕಾನೂನು ಇಲಾಖೆ ಅಭಿಪ್ರಾಯ<br>5. ಉಪನಿರ್ದೇಶಕರ ಜ್ಞಾಪನ<br>6. ಶಾಲಾ ದಾಖಲಾತಿವಹಿಯ ದೃಢೀಕೃತ ಪ್ರತಿಉಪನಿರ್ದೇಶಕರಿಂದ | ರೂ.100/– |

**ಎಮ್‌ಎಸ್‌ಎ ಅಂಕಪಟ್ಟಿ ಸಹಿತ ಅರ್ಜಿ ನಮೂನೆ**
**MSA Marks Statement cum Application**

ನಪಾಸಾದ ವಿದ್ಯಾರ್ಥಿಗಳಿಗೆ ಪ್ರತಿ ವರ್ಷ ಅಂಕಪಟ್ಟಿ ಸಹಿತ ಅರ್ಜಿ ನಮೂನೆ ಗಳನ್ನು ಮಂಡಳಿಯಿಂದ ಶಾಲೆಗಳಿಗೆ ರವಾನಿಸಲಾಗುವುದು. ಈ ದಾಖಲೆಯನ್ನು ಪರೀಕ್ಷೆ ತೆಗೆದುಕೊಳ್ಳಲು ಹಾಗೂ ದಾಖಲೆಯಾಗಿಯೂ ಉಪಯೋಗಿಸಬಹುದು.

**ಎಮ್‌ಎಸ್‌ಎ ಪಡೆಯಲು ಅರ್ಜಿ ತುಂಬಲು ಸೂಚನೆಗಳು**

ಎಮ್‌ಎಸ್‌ಎ ಪಡೆಯಲು ಅರ್ಜಿ ನಿಗದಿಪಡಿಸಲಾಗಿದೆ. ಇದು ಎಲ್ಲಾ ಅಧಿಕೃತ ಶಾಲೆಗಳಲ್ಲೂ ದೊರೆಯುತ್ತದೆ. ಅರ್ಜಿಗೆ ಯಾವುದೇ ಶುಲ್ಕ ಇರುವುದಿಲ್ಲ.

**ಅರ್ಜಿಯಲ್ಲಿ ವಿದ್ಯಾರ್ಥಿ ಭರ್ತಿ ಮಾಡಬೇಕಾದ ಅಂಕಣ :**

**ವಿದ್ಯಾರ್ಥಿಯು ಕೋರುತ್ತಿರುವ ದಾಖಲೆ :** ನೀವು ಯಾವ ದಾಖಲೆಯನ್ನು ಕೋರುತ್ತಿದ್ದೀರಿ ಎಂದು ಸ್ಪಷ್ಟವಾಗಿ ಅರ್ಜಿಯಲ್ಲಿ ಬರೆಯಬೇಕು.

**ಬ್ಯಾಂಕ್ ಹುಂಡಿಯ ವಿವರ** : ನೀವು ಪಡೆದಿರುವ ಬ್ಯಾಂಕ್ ಹುಂಡಿಯ ಸಂಖ್ಯೆ,ದಿನಾಂಕ,ಮೊತ್ತ, ಬ್ಯಾಂಕ್ ಹೆಸರು ಹಾಗೂ ಮೊತ್ತವನ್ನು ಅರ್ಜಿಯಲ್ಲಿ ಬರೆದು ಹುಂಡಿಯ ಹಿಂಬಾಗದಲ್ಲಿ ತಮ್ಮ ಹೆಸರು,ವಿಳಾಸ ಹಾಗೂ ಯಾವ ಉದ್ದೇಶಕ್ಕಾಗಿ ಹುಂಡಿಯನ್ನು ಪಡೆದಿದ್ದೀರಿ ಎಂಬ ಬಗ್ಗೆ ನಮೂದಿಸಬೇಕು

**ವಿದ್ಯಾರ್ಥಿಯ ವಿವರ :** ವಿದ್ಯಾರ್ಥಿಯು ತನ್ನ ಹೆಸರು,ತಂದೆ,ತಾಯಿಯ ಹೆಸರು ,ಜನ್ಮದಿನಾಂಕ,ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಓದಿದ ಭಾಷೆಗಳು ಹಾಗೂ ವಿಷಯಗಳು, ದಾಖಲೆಗಳಲ್ಲಿರುವಂತೆ ಬರೆದು ದಾಖಲೆಪಡೆಯುತ್ತಿರುವ ಉದ್ದೇಶ ಹಾಗೂ ಪೂರ್ಣ ಅಂಚೆ ವಿಳಾಸವನ್ನು ಬರೆದಿರಬೇಕು.

ಅರ್ಜಿ ತುಂಬಿದ ನಂತರ ಮಾಹಿತಿ ಸರಿಯಾಗಿದೆ ಎಂದು ವಿದ್ಯಾರ್ಥಿ ಸಹಿ ಮಾಡಬೇಕು ಇದು ಕಡ್ಡಾಯ

**ಶಾಲೆಯ ಮುಖ್ಯಸ್ಥರು ಭರ್ತಿ ಮಾಡಬೇಕಾದ ಅಂಕಣ ;**

**ಸಂಸ್ಥೆಯ ಮುಖ್ಯಸ್ಥರು ನೀಡಬೇಕಾದ ಮಾಹಿತಿ** : ಶಾಲೆಯ ಹೆಸರು, ಶಾಲಾ ಸಂಕೇತ, ವಿದ್ಯಾರ್ಥಿಯ ನೋಂದಣಿಸಂಖ್ಯೆ ಹಾಗೂ ಯಾವ ವರ್ಷ/ಗಳಲ್ಲಿ ಉತ್ತೀರ್ಣ/ಅನುತ್ತೀರ್ಣ ನಾಗಿರುತ್ತಾರೆ ಎಂಬ ಬಗ್ಗೆ ಫಲಿತಾಂಶ ಪಟ್ಟಿಗಳನ್ನು ಪರಿಶೀಲಿಸಿ ಮಾಹಿತಿ ದಾಖಲಿಸಬೇಕು.
ಅರ್ಜಿ ತುಂಬಿದ ನಂತರ ಮಾಹಿತಿ ಸರಿಯಾಗಿದೆ ಎಂದು ಶಾಲೆಯ ಮುಖ್ಯಸ್ಥರು ಸಹಿ ಮಾಡಬೇಕು ಇದು ಕಡ್ಡಾಯ.

**ಶುಲ್ಕ**

ರೂ.50/– ರೂಗಳಿಗೆ ರಾಷ್ಟ್ರೀಕೃತ ಬ್ಯಾಂಕಿನಲ್ಲಿ "Secretary,KSEEB,Bangalore" ಎಂದು ಹುಂಡಿಯನ್ನು ಪಡೆದು ಅರ್ಜಿ ಜೊತೆಗೆ ಸಲ್ಲಿಸಬೇಕು. Bangalore Payable ಹುಂಡಿಯಾಗಿರಬೇಕು. ಅತಿ ತುರ್ತಾಗಿ ಅಂಕಪಟ್ಟಿ ಪಡೆಯಬೇಕಾದಲ್ಲಿ ವಿಶೇಷ ಪ್ರಕರಣದಡಿ ರೂ.100/– ಶುಲ್ಕ ಪಾವತಿಸಬೇಕು.

**ಅರ್ಜಿ ಎಲ್ಲಿಗೆ ಸಲ್ಲಿಸುವುದು**

1. **ಪ್ರಸ್ತುತ ವರ್ಷದಲ್ಲಿ ವಿದ್ಯಾರ್ಥಿ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಅನುತ್ತೀರ್ಣನಾಗಿದ್ದರೆ :**
   ಪ್ರಸ್ತುತ ವರ್ಷದಲ್ಲಿ ವಿದ್ಯಾರ್ಥಿ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಅನುತ್ತೀರ್ಣನಾಗಿದ್ದು ಆ ವರ್ಷದಲ್ಲಿಯೇ ಎಮ್‌ಎಸ್‌ಎ ಪ್ರತಿ ಪಡೆಯಲು ಬಯಸಿಯ, ವಿದ್ಯಾರ್ಥಿಯು ಎಸ್.ಎಸ್.ಎಲ್.ಸಿ ವಿದ್ಯಾಭ್ಯಾಸ ಮಾಡಿದ ಶಾಲೆಯ ಮುಖ್ಯಶಿಕ್ಷಕರ ಮೂಲಕ ಅರ್ಜಿಯನ್ನು ಅಗತ್ಯ ದಾಖಲೆಗಳೊಂದಿಗೆ ಪರೀಕ್ಷಾಮಂಡಳಿಯ ಕೇಂದ್ರ ಕಛೇರಿಗೆ ಕಳುಹಿಸಬೇಕು. ಇಲ್ಲವಾದಲ್ಲಿ ಅರ್ಜಿಯನ್ನು ವಿಭಾಗೀಯ ಪರೀಕ್ಷಾ ಮಂಡಳಿಗೆ ಸಲ್ಲಿಸಬೇಕು.
2. **1963 ಹಾಗೂ ಹಿಂದಿನವರ್ಷಗಳಲ್ಲಿ ವಿದ್ಯಾರ್ಥಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅನುತ್ತೀರ್ಣನಾಗಿದ್ದರೆ**
   1963 ಹಾಗೂ ಹಿಂದಿನವರ್ಷಗಳಲ್ಲಿ ವಿದ್ಯಾರ್ಥಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅನುತ್ತೀರ್ಣನಾಗಿದ್ದು ಎಮ್‌ಎಸ್‌ಎ ಪ್ರತಿ ಪಡೆಯಲು ಬಯಸಿದಲ್ಲಿ ಅಂತಹ ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ ವಿದ್ಯಾಭ್ಯಾಸ ಮಾಡಿದ ಶಾಲೆಯ ಮುಖ್ಯಶಿಕ್ಷಕರ ಮೂಲಕ ಅರ್ಜಿಯನ್ನು ಅಗತ್ಯ ದಾಖಲೆಗಳೊಂದಿಗೆ ಪರೀಕ್ಷಾಮಂಡಳಿಯ ಕೇಂದ್ರ ಕಛೇರಿಗೆ ಕಳುಹಿಸಬೇಕು.
3. **1963 ರ ನಂತರದ ವರ್ಷಗಳಲ್ಲಿ ವಿದ್ಯಾರ್ಥಿ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಅನುತ್ತೀರ್ಣನಾಗಿದ್ದರೆ:**
   1963ರ ನಂತರದ ವರ್ಷಗಳಲ್ಲಿ ವಿದ್ಯಾರ್ಥಿ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಅನುತ್ತೀರ್ಣನಾಗಿದ್ದು ಎಮ್‌ಎಸ್‌ಎ ಪ್ರತಿ ಪಡೆಯಲು ಬಯಸಿದಲ್ಲಿ ವಿದ್ಯಾರ್ಥಿಯು ಎಸ್.ಎಸ್.ಎಲ್.ಸಿ ವಿದ್ಯಾಭ್ಯಾಸ ಮಾಡಿದ ಶಾಲೆಯ ಮುಖ್ಯಶಿಕ್ಷಕರ ಮೂಲಕ ಅರ್ಜಿಯನ್ನು ಅಗತ್ಯ ದಾಖಲೆಗಳೊಂದಿಗೆ ಸಂಬಂಧಿಸಿದ ವಿಭಾಗೀಯ ಪರೀಕ್ಷಾಮಂಡಳಿಗೆ ಕಳುಹಿಸಿ ಪಡೆದುಕೊಳ್ಳಬಹುದು.

**ಸೇವೆ ನೀಡಲು ಕಾಲ ಮಿತಿ**

1. ಸಾಮಾನ್ಯ ಪ್ರಕರಗಳಿಗೆ 30 ಧಿನಗಳು.
2. ವಿಶೇಷ ಪ್ರಕರಣಗಳಿಗೆ 5 ದಿನಗಳು.

**: ಎಮ್‌ಎಸ್‌ಎ ಪ್ರತಿ ಯನ್ನು ರವಾನಿಸುವ ಬಗೆ :**

ತುರ್ತು ಅಂಚೆ ಮೂಲಕ ಶಾಲೆಗೆ ರವಾನಿಸಲಾಗುವುದು. ಶಾಲೆಯ ಮುಖ್ಯಶಿಕ್ಷಕರಿಂದ ವಿದ್ಯಾರ್ಥಿಯು ಎಮ್‌ಎಸ್‌ಎ ಪಡೆದುಕೊಳ್ಳಬೇಕು. ಯಾವುದೇ ಕಾರಣಕ್ಕೂ ವಿದ್ಯಾರ್ಥಿಗೆ ಎಮ್‌ಎಸ್‌ಎ ನೇರವಾಗಿ ಮಂಡಳಿಯಿಂದ ವಿತರಿಸಲಾಗುವುದಿಲ್ಲ.

**ವಲಸೆ ಪ್ರಮಾಣ ಪತ್ರ**

ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಹೊರರಾಜ್ಯಕ್ಕೆ ಮುಂದಿನ ವಿದ್ಯಾಭ್ಯಾಸಕ್ಕಾಗಿ ತೆರಳುವ ವಿದ್ಯಾರ್ಥಿಗಳಿಗೆ ಕೋರಿಕೆಯ ಮೇಲೆ ವಲಸೆ ಪ್ರಮಾಣ ಪತ್ರವನ್ನು ಮಂಡಳಿಯಿಂದ ನೀಡುತ್ತದೆ.

**ವಲಸೆ ಪ್ರಮಾಣಪತ್ರ ಪಡೆಯಲು ಅರ್ಜಿ ತುಂಬಲು ಸೂಚನೆಗಳು**

ವಲಸೆ ಪ್ರಮಾಣಪತ್ರ್ರ ಪಡೆಯಲು ಅರ್ಜಿ ನಿಗದಿಪಡಿಸಲಾಗಿದೆ. ಇದು ಎಲ್ಲಾ ಅಧಿಕೃತ ಶಾಲೆಗಳಲ್ಲೂ ದೊರೆಯುತ್ತದೆ. ಅರ್ಜಿಗೆ ಯಾವುದೇ ಶುಲ್ಕ ಇರುವುದಿಲ್ಲ.

**ಅರ್ಜಿಯಲ್ಲಿ ವಿದ್ಯಾರ್ಥಿ ಭರ್ತಿ ಮಾಡಬೇಕಾದ ಅಂಕಣ :**

**ವಿದ್ಯಾರ್ಥಿಯು ಕೋರುತ್ತಿರುವ ದಾಖಲೆ :** ನೀವು ಯಾವ ದಾಖಲೆಯನ್ನು ಕೋರುತ್ತಿದ್ದೀರಿ ಎಂದು ಸ್ಪಷ್ಟವಾಗಿ ಅರ್ಜಿಯಲ್ಲಿ ಬರೆಯಬೇಕು.

**ಬ್ಯಾಂಕ್ ಹುಂಡಿಯ ವಿವರ** : ನೀವು ಪಡೆದಿರುವ ಬ್ಯಾಂಕ್ ಹುಂಡಿಯ ಸಂಖ್ಯೆ,ದಿನಾಂಕ,ಮೊತ್ತ, ಬ್ಯಾಂಕ್ ಹೆಸರು ಹಾಗೂ ಮೊತ್ತವನ್ನು ಅರ್ಜಿಯಲ್ಲಿ ಬರೆದು ಹುಂಡಿಯ ಹಿಂಬಾಗದಲ್ಲಿ ತಮ್ಮ ಹೆಸರು,ವಿಳಾಸ ಹಾಗೂ ಯಾವ ಉದ್ದೇಶಕ್ಕಾಗಿ ಹುಂಡಿಯನ್ನು ಪಡೆದಿದ್ದೀರಿ ಎಂಬ ಬಗ್ಗೆ ನಮೂದಿಸಬೇಕು

**ವಿದ್ಯಾರ್ಥಿಯ ವಿವರ :** ವಿದ್ಯಾರ್ಥಿಯು ತನ್ನ ಹೆಸರು,ತಂದೆ,ತಾಯಿಯ ಹೆಸರು ,ಜನ್ಮದಿನಾಂಕ,ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಓದಿದ ಭಾಷೆಗಳು ಹಾಗೂ ವಿಷಯಗಳು, ದಾಖಲೆಗಳಲ್ಲಿರುವಂತೆ ಬರೆದು ದಾಖಲೆಪಡೆಯುತ್ತಿರುವ ಉದ್ದೇಶ ಹಾಗೂ ಪೂರ್ಣ ಅಂಚೆ

ವಿಳಾಸವನ್ನು ಬರೆದಿರಬೇಕು. ಅರ್ಜಿ ತುಂಬಿದ ನಂತರ ಮಾಹಿತಿ ಸರಿಯಾಗಿದೆ ಎಂದು ವಿದ್ಯಾರ್ಥಿ ಸಹಿ ಮಾಡಬೇಕು ಇದು ಕಡ್ಡಾಯ

**ಶಾಲೆಯ ಮುಖ್ಯಸ್ಥರು ಭರ್ತಿ ಮಾಡಬೇಕಾದ ಅಂಕಣ ;**

**ಸಂಸ್ಥೆಯ ಮುಖ್ಯಸ್ಥರು ನೀಡಬೇಕಾದ ಮಾಹಿತಿ** : ಶಾಲೆಯ ಹೆಸರು, ಶಾಲಾ ಸಂಕೇತ, ವಿದ್ಯಾರ್ಥಿಯ ನೋಂದಣಿಸಂಖ್ಯೆ ಹಾಗೂ ಯಾವ ವರ್ಷದಲ್ಲಿ ವಿದ್ಯಾರ್ಥಿ ಉತ್ತೀರ್ಣನಾಗಿರುತ್ತಾರೆ ಎಂದು ದಾಖಲಿಸಬೇಕು ಹಾಗೂ ಫಲಿತಾಂಶ ಪಟ್ಟಿಯ ಪ್ರತಿಯನ್ನು ಮುಖ್ಯಶಿಕ್ಷಕರು ದೃಢೀಕರಿಸಿ ಅರ್ಜಿಯೊಂದಿಗೆ ಸಲ್ಲಿಸಬೇಕು.

ಅರ್ಜಿ ತುಂಬಿದ ನಂತರ ಮಾಹಿತಿ ಸರಿಯಾಗಿದೆ ಎಂದು ಶಾಲೆಯ ಮುಖ್ಯಸ್ಥರು ಸಹಿ ಮಾಡಬೇಕು ಇದು ಕಡ್ಡಾಯ.

1. **ಶುಲ್ಕ**

   ರೂ.100/– ರೂಗಳಿಗೆ ರಾಷ್ಟ್ರೀಕೃತ ಬ್ಯಾಂಕಿನಲ್ಲಿ "Secretary,KSEEB,Bangalore" ಎಂದು ಹುಂಡಿಯನ್ನು ಪಡೆದು ಅರ್ಜಿ ಜೊತೆಗೆ ಸಲ್ಲಿಸಬೇಕು. Bangalore Payable ಹುಂಡಿಯಾಗಿರಬೇಕು. ಅತಿ ತುರ್ತಾಗಿ ವಲಸೆ ಪ್ರಮಾಣಪತ್ರ ಬೇಕಾದಲ್ಲಿ ವಿಶೇಷ ಪ್ರಕರಣದಡಿ ರೂ.200/– ಶುಲ್ಕ ಪಾವತಿಸಬೇಕು.

2. **ಫಲಿತಾಂಶ ಪಟ್ಟಿ**

   ಫಲಿತಾಂಶ ಪಟ್ಟಿಯ ದೃಢೀಕೃತ ಪ್ರತಿಯನ್ನು ಅರ್ಜಿಯೊಂದಿಗೆ ಲಗತ್ತಿಸಬೇಕು.

**ಅರ್ಜಿ ಎಲ್ಲಿಗೆ ಸಲ್ಲಿಸುವುದು**

1. **ಪ್ರಸ್ತುತ ವರ್ಷದಲ್ಲಿ ವಿದ್ಯಾರ್ಥಿ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತೀರ್ಣನಾಗಿದ್ದರೆ :**

   ಪ್ರಸ್ತುತ ವರ್ಷದಲ್ಲಿ ವಿದ್ಯಾರ್ಥಿ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಅನುತ್ತೀರ್ಣನಾಗಿದ್ದು ಆ ವರ್ಷದಲ್ಲಿಯೇ ವಲಸೆ ಪ್ರಮಾಣಪತ್ರ ಪಡೆಯಲು ಬಯಸಿದಲ್ಲಿ, ವಿದ್ಯಾರ್ಥಿಯು ಎಸ್.ಎಸ್.ಎಲ್.ಸಿ ವಿದ್ಯಾಭ್ಯಾಸ ಮಾಡಿದ ಶಾಲೆಯ ಮುಖ್ಯಶಿಕ್ಷಕರ ಮೂಲಕ ಅರ್ಜಿಯನ್ನು ಅಗತ್ಯ ದಾಖಲೆಗಳೊಂದಿಗೆ ಪರೀಕ್ಷಾಮಂಡಳಿಯ ಕೇಂದ್ರ ಕಛೇರಿಗೆ ಕಳುಹಿಸಬೇಕು.

2. ಹಿಂದಿನವರ್ಷಗಳಲ್ಲಿ ವಿದ್ಯಾರ್ಥಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣನಾಗಿದ್ದರೆ :

ಹಿಂದಿನವರ್ಷಗಳಲ್ಲಿ ವಿದ್ಯಾರ್ಥಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣನಾಗಿದ್ದು ಇದೀಗ ವಲಸೆ ಪ್ರಮಾಣಪತ್ರ ಪಡೆಯಲು ಬಯಸಿದಲ್ಲಿ ಅಂತಹ ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ ವಿದ್ಯಾಭ್ಯಾಸ ಮಾಡಿದ ಶಾಲೆಯ ಮುಖ್ಯಶಿಕ್ಷಕರ ಮೂಲಕ ಅರ್ಜಿಯನ್ನು ಅಗತ್ಯ ದಾಖಲೆಗಳೊಂದಿಗೆ ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾಮಂಡಳಿಯ ವಿಭಾಗೀಯ ಕಛೇರಿಗೆ ಕಳುಹಿಸಬೇಕು.

**ಸೇವೆ ನೀಡಲು ಕಾಲ ಮಿತಿ**

1. ಸಾಮಾನ್ಯ ಪ್ರಕರಗಳಿಗೆ 30 ಧಿನಗಳು.
2. ವಿಶೇಷ ಪ್ರಕರಣಗಳಿಗೆ 5 ದಿನಗಳು.

**: ವಲಸೆ ಪ್ರಮಾಣಪತವನ್ನು ರವಾನಿಸುವ ಬಗೆ :**

ತುರ್ತು ಅಂಚೆ ಮೂಲಕ ಶಾಲೆಗೆ ರವಾನಿಸಲಾಗುವುದು. ಶಾಲೆಯ ಮುಖ್ಯಶಿಕ್ಷಕರಿಂದ ವಿದ್ಯಾರ್ಥಿಯು ವಲಸೆ ಪ್ರಮಾಣಪತ್ರ ಪಡೆದುಕೊಳ್ಳಬೇಕು. ಯಾವುದೇ ಕಾರಣಕ್ಕೂ ವಿದ್ಯಾರ್ಥಿಗೆ ವಲಸೆ ಪ್ರಮಾಣಪತ್ರ ನೇರವಾಗಿ ಮಂಡಳಿಯಿಂದ ವಿತರಿಸಲಾಗುವುದಿಲ್ಲ.

**ಉತ್ತರಪತ್ರಿಕೆಗಳ ಮರುಎಣಿಕೆ, ಛಾಯಾಪ್ರತಿ ಹಾಗೂ ಮರುಮೌಲ್ಯಮಾಪನ**

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಪ್ರತಿ ವರ್ಷ ಫಲಿತಾಂಶ ಪ್ರಕಟಣೆ ಮಾಡಿದ ನಂತರ ಎಲ್ಲಾ ವಿಷಯಗಳ ಉತ್ತರಪತ್ರಕೆಗಳ ಮರುಎಣಿಕೆ, ಛಾಯಾಪ್ರತಿ ಹಾಗೂ ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಲು ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಿದೆ.

**ಮರುಎಣಿಕೆ ಹೇಗೆ ಮಾಡುತ್ತಾರೆ.**

ಕಾರಣಾಂತರಗಳಿಂದ ಉತ್ತರಪತ್ರಿಕೆಯಲ್ಲಿನ ಅಂಕಗಳ ಕೂಡುವಿಕೆ, ಪ್ರತಿ ಪುಟದಿಂದ ಮುಖಪುಟಕ್ಕೆ ಅಂಕಗಳ ವರ್ಗಾವಣೆ , ಮುಖಪುಟದಲ್ಲಿ ಭಾಗ–'ಎ' ಹಾಗೂ ಭಾಗ–'ಬಿ' ಗಳ ಅಂಕಗಳ ಕೂಡುವಿಕೆ ದೋಷ ಹಾಗೂ ಉತ್ತರಪತ್ರಿಕೆಯಲ್ಲಿ ನಮೂದಿಸಿರುವ ಅಂಕಗಳನ್ನು ಹಾಜರಾತಿ ಸಹಿತ ಅಂಕಪಟ್ಟಿಗೆ ವರ್ಗಾವಣೆ ಮಾಡಿರುವುದು ಹಾಗೂ ಷೇಡಿಂಗ್ ನಲ್ಲಿ ಏನಾದರೂ ದೋಷಗಳಿದ್ದಲ್ಲಿ ಪರಿಶೀಲಿಸಿ ಸರಿಪಡಿಸಲಾಗುತ್ತದೆ.

ಮರುಎಣಿಕೆಗೆ ಅರ್ಜಿ ಸ್ವೀಕೃತ ವಾದ ನಂತರ ವಿದ್ಯಾರ್ಥಿಯು ಕೋರಿರುವ ವಿಷಯಗಳ ಮೂಲ ಉತ್ತರಪತಿಕೆಗಳನ್ನು ತೆಗೆದು ಅಂಕಗಳನ್ನು ಮರುಎಣಿಕೆ ಮಾಡಲಾಗುತ್ತದೆ. ಇದರಲ್ಲಿ ಬದಲಾವಣೆಗಳು ಕಂಡುಬಂದಲ್ಲಿ ಅಥವಾ ಯಾವುದೇ ಬದಲಾವಣೆಗಳು ಇಲ್ಲದಿದ್ದರೂ ಸಹ

ವಿದ್ಯಾರ್ಥಿಗೆ ತಕ್ಷಣ ತಿಳುವಳಿಕೆ ಪತ್ರವನ್ನು ಅರ್ಜಿಯಲ್ಲಿ ವಿದ್ಯಾರ್ಥಿ ತಿಳಿಸಿರುವ ವಿಳಾಸಕ್ಕೆ ರವಾನಿಸಲಾಗುವುದು.

ಅಂಕಗಳಲ್ಲಿ ಬದಲಾವಣೆ ಕಂಡುಬಂದಾಗ ಫಲಿತಾಂಶ ಪರಿಷ್ಕರಿಸಲಾಗುತ್ತದೆ. ಪರಿಷ್ಕರಿಸಿದ ಫಲಿತಾಂಶ ಪಟ್ಟಿಯನ್ನು ಶಾಲೆಗೆ ತಕ್ಷಣ ತುರ್ತು ಅಂಚೆ ಮೂಲಕ ರವಾನಿಸಲಾಗುತ್ತದೆ.

ಉತ್ತರಪತ್ರಿಕೆಗಳ ಮರುಎಣಿಕೆಗೆ ಅರ್ಜಿನಮೂನೆಯನ್ನು ನಿಗದಿಪಡಿಸಲಾಗಿದೆ. ಇದು ಎಲ್ಲಾ ಅಧಿಕೃತ ಶಾಲೆಗಳಲ್ಲೂ ದೊರೆಯುತ್ತದೆ. ಅರ್ಜಿಗೆ ಯಾವುದೇ ಶುಲ್ಕ ಇರುವುದಿಲ್ಲ.

**ಅರ್ಜಿಯಲ್ಲಿ ವಿದ್ಯಾರ್ಥಿ ಭರ್ತಿ ಮಾಡಬೇಕಾದ ಅಂಕಣ :**

**ವಿದ್ಯಾರ್ಥಿಯ ಪೂರ್ಣ ಅಂಚೆ ವಿಳಾಸ :** ವಿದ್ಯಾರ್ಥಿಯು ತನ್ನ ಹೆಸರು ಮತ್ತು ವಾಸಸ್ಥಳದ ಪೂರ್ಣ ವಿಳಾಸವನ್ನು ಪಿನ್ ಕೋಡ್ ಸಹಿತವಾಗಿ ಕಡ್ಡಾಯವಾಗಿ ಬರೆಯಬೇಕು ಇಲ್ಲವಾದಲ್ಲಿ ಮಂಡಳಿಯಿಂದ ಕಳಿಸುವ ತಿಳುವಳಿಕೆ ಪತ್ರ ಸರಿಯಾದ ಸಮಯಕ್ಕೆ ವಿದ್ಯಾರ್ಥಿಗೆ ತಲುಪುವುದಿಲ್ಲ.

**ವಿದ್ಯಾರ್ಥಿಯ ನೋಂದಣಿ ಸಂಖ್ಯೆ** : ವಿದ್ಯಾರ್ಥಿಯು ತನ್ನ ನೋಂದಣಿ ಸಂಖ್ಯೆ, ಪರೀಕ್ಷೆಯ ವರ್ಷ ಹಾಗೂ ತಿಂಗಳನ್ನು ಪ್ರವೇಶ ಪತ್ರದಲ್ಲಿರುವಂತೆ ನಮೂದಿಸಬೇಕು.

**ವಿದ್ಯಾರ್ಥಿಯು ಓದಿದ ಶಾಲೆಯ ಹೆಸರು ಮತ್ತು ವಿಳಾಸ :** ವಿದ್ಯಾರ್ಥಿಯು ತಾನು ಓದಿದ ಶಾಲೆಯ ಪೂರ್ಣ ವಿಳಾಸವನ್ನು ಪಿನ್ ಕೋಡ್ ಸಹಿತವಾಗಿ ಕಡ್ಡಾಯವಾಗಿ ಬರೆಯಬೇಕು ಇಲ್ಲವಾದಲ್ಲಿ ಕಾರಣಾಂತರಗಳಿಂದ ವಿದ್ಯಾರ್ಥಿಯು ನೀಡಿರುವ ವಿಳಾಸಕ್ಕೆ ರವಾನಿಸಲಾದ ಪತ್ರಗಳು ಹಿಂತಿರುಗಿ ಮಂಡಳಿಗೆ ಬಂದಲ್ಲಿ ಅಂತಹ ವಿದ್ಯಾರ್ಥಿಗಳ ಪತ್ರಗಳನ್ನು ಶಾಲೆಯ ವಿಳಾಸಕ್ಕೆ ರವಾನಿಸಲಾಗುವುದು.

**ಪರೀಕ್ಷಾ ಕೇಂದ್ರದ ಸಂಖ್ಯೆ** : ವಿದ್ಯಾರ್ಥಿಯ ಪ್ರವೇಶ ಪತ್ರದಲ್ಲಿರುವಂತೆ ಕೇಂದ್ರದ ಸಂಖ್ಯೆಯನ್ನು ನಮೂದಿಸಬೇಕು ಇಲ್ಲವಾದಲ್ಲಿ ವಿದ್ಯಾರ್ಥಿಯ ಉತ್ತರಪತ್ರಿಕೆಯನ್ನು ಹುಡುಕುವಲ್ಲಿ ವಿಳಂಬವಾಗಿ ನಿಗದಿತ ಸಮಯಕ್ಕೆ ವಿದ್ಯಾರ್ಥಿಗೆ ಮಾಹಿತಿ ರವಾನಿಸಲು ತೊಂದರೆಯಾಗುವುದು.

**ಮರುಎಣಿಕೆಗಾಗಿ ಅರ್ಜಿ ಸಲ್ಲಿಸಬಯಸುವ ವಿಷಯ/ ಗಳು :** ಯಾವ ವಿಷಯ/ಗಳ ಉತ್ತರಪತ್ರಿಕೆಯ ಅಂಕಗಳ ಮರುಎಣಿಕೆ ಮಾಡಬೇಕೊ ಆ ವಿಷಯಗಳು, ವಿಷಯ ಸಂಕೇತ, ಶಿಕ್ಷಣ ಮಾಧ್ಯಮ ಹಾಗೂ ಪ್ರಕಟಗೊಂಡಿರುವ ಅಂಕಗಳನ್ನು ಸ್ಪಷ್ಟವಾಗಿ ನಮೂದಿಸಬೇಕು. ಇದರಿಂದ ಯಾವ ಹಂತದಲ್ಲಿ ತಪ್ಪಾಗಿದೆ ಎಂದು ಪರಿಶೀಲಿಸಲು ಅನುಕೂಲವಾಗುತ್ತದೆ.

**ಶುಲ್ಕ** : ಒಂದು ವಿಷಯಕ್ಕೆ ರೂ.150/–ರಂತೆ ಎಷ್ಟು ವಿಷಯಗಳಿಗೆ ಅರ್ಜಿ ಸಲ್ಲಿಸಬಯಸುತ್ತೀರೋ ಅಷ್ಟು ಮೊತ್ತಕ್ಕೆ ಒಂದೇ ಹುಂಡಿಯನ್ನು ಯಾವುದಾದರೂ ರಾಷ್ಟ್ರೀಕೃತ ಬ್ಯಾಂಕಿನಲ್ಲಿ "Secretary,KSEEB,Bangalore" ಎಂದು ಹುಂಡಿಯನ್ನು ಪಡೆದು ಅರ್ಜಿ ಜೊತೆಗೆ ಸಲ್ಲಿಸಬೇಕು. Bangalore Payable ಹುಂಡಿಯಾಗಿರಬೇಕು.

**ಬ್ಯಾಂಕ್ ಹುಂಡಿಯ ವಿವರ** : ನೀವು ಪಡೆದಿರುವ ಬ್ಯಾಂಕ್ ಹುಂಡಿಯ ಸಂಖ್ಯೆ,ದಿನಾಂಕ,ಮೊತ್ತ, ಬ್ಯಾಂಕ್ ಹೆಸರು ಹಾಗೂ ಮೊತ್ತವನ್ನು ಅರ್ಜಿಯಲ್ಲಿ ಬರೆದು, ಹುಂಡಿಯ ಹಿಂಬಾಗದಲ್ಲಿ ತಮ್ಮ ಹೆಸರು,ವಿಳಾಸ ಹಾಗೂ ಯಾವ ಉದ್ದೇಶಕ್ಕಾಗಿ ಹುಂಡಿಯನ್ನು ಪಡೆದಿದ್ದೀರಿ ಎಂಬ ಬಗ್ಗೆ ನಮೂದಿಸಬೇಕು

ಅರ್ಜಿ ತುಂಬಿದ ನಂತರ ಮಾಹಿತಿ ಸರಿಯಾಗಿದೆ ಎಂದು ವಿದ್ಯಾರ್ಥಿ ಹಾಗೂ ಪೋಷಕರು ಸಹಿ ಮಾಡಬೇಕು ಇದು ಕಡ್ಡಾಯ. ಶಾಲೆಯ ಮುಖ್ಯಸ್ಥರ ಸಹಿ ಕಡ್ಡಾಯವಲ್ಲ.

ನೇರವಾಗಿ ವಿದ್ಯಾರ್ಥಿಯೇ ಅರ್ಜಿ ಸಲ್ಲಿಸಬಹುದು. ಶಾಲೆಯ ಮುಖಾಂತರ ಅರ್ಜಿ ಸಲ್ಲಿಸುವುದು ಕಡ್ಡಾಯವಲ್ಲ.

1. ಅರ್ಜಿ.
2. ಬ್ಯಾಂಕ್ ಹುಂಡಿ.
3. ಪ್ರವೇಶ ಪತ್ರದ ಪ್ರತಿ.
4. ಸ್ವ ವಿಳಾಸವಿರುವ ಅಂಚೆ ಕವರು ಸ್ಟಾಂಪ್ ನೊಂದಿಗೆ .

**ಸೇವೆ ನೀಡಲು ಕಾಲ ಮಿತಿ**

1. ಅರ್ಜಿ ಸ್ವಿಕೃತವಾದ ದಿನದಿಂದ 30 ದಿನಗಳು.

**: ಮರುಎಣಿಕೆ ಫಲಿತಾಂಶವನ್ನು ರವಾನಿಸುವ ಬಗೆ :**

ಸಾಮಾನ್ಯ ಅಂಚೆ ಮೂಲಕ ವಿದ್ಯಾರ್ಥಿಯು ಅರ್ಜಿಯಲ್ಲಿ ನಮೂದಿಸಿರುವ ವಿಳಾಸಕ್ಕೆ ರವಾನಿಸಲಾಗುವುದು. ವಿಳಾಸ ಸರಿ ಇಲ್ಲದೇ ಮಂಡಳಿಗೆ ವಾಪಸ್ ಬಂದ ಪ್ರಕರಣಗಳಲ್ಲಿ ಶಾಲೆಯ ಮುಖ್ಯಶಿಕ್ಷಕರ ವಿಳಾಸಕ್ಕೆ ಮಾಹಿತಿಯನ್ನು ಮರು ರವಾನಿಸಲಾಗುವುದು.

## ಖಾಸಗಿ ವಿದ್ಯಾರ್ಥಿಗಳು Private Candidates

- ಅನಿವಾರ್ಯ ಕಾರಣಗಳಿಂದ ಅರ್ದದಲ್ಲೆ ವಿದ್ಯಾಭ್ಯಾಸ ಮೊಟಕುಗೊಳಿಸಿರುವ ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸವನ್ನು ಶಾಲೆಯ ಹೊರಗಿನಿಂದಲೇ ಮುಂದುವರೆಸಲು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾಮಂಡಳಿ ಅವಕಾಶ ಕಲ್ಪಿಸಿದೆ. ಇಂತಹ ವಿದ್ಯಾರ್ಥಿಗಳನ್ನು ಖಾಸಗಿ ವಿದ್ಯಾರ್ಥಿಗಳೆಂದು ಕರೆಯಲಾಗಿದೆ.

- ಮಾನ್ಯತೆ ಪಡೆಯದ ಶಾಲಾ ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳನ್ನು ಖಾಸಗಿ ವಿದ್ಯಾರ್ಥಿಗಳೆಂದು ಪರಿಗಣಿಸಲಾಗಿದೆ.

- ಮರುಎಣಿಕೆ ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲೆಗಳು,

- ಶಾಲಾಸಂಕೇತ ಪಡೆಯದ ಶಾಲಾ ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳನ್ನು ಖಾಸಗಿ ವಿದ್ಯಾರ್ಥಿಗಳೆಂದು ಪರಿಗಣಿಸಲಾಗಿದೆ.

**ಖಾಸಗಿಯಾಗಿ ಪರೀಕ್ಷೆ ತೆಗೆದುಕೊಳ್ಳಲು ಬೇಕಾದ ಅರ್ಹತೆಗಳೇನು ?**

ಆಯಾ ಶೈಕ್ಷಣಿಕ ವರ್ಷದ ಮಾರ್ಚ ಒಂದನೇ ತಾರೀಖಿಗೆ ಹದಿನೈದು ವರ್ಷ ಪೂರ್ಣಗೊಳಿಸಿರಬೇಕು. ಖಾಸಗಿಯಾಗಿ ಪರೀಕ್ಷೆ ತೆಗೆದುಕೊಳ್ಳಲು ಯಾರು ಅನರ್ಹರು:

ಕರ್ನಾಟಕದ ಎಸ್.ಎಸ್.ಎಲ್.ಸಿ ಪರೀಕ್ಷೆ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವವರು ಖಾಸಗಿ ವಿದ್ಯಾರ್ಥಿಗಳಾಗಿ ಪರೀಕ್ಷೆ ತೆಗೆದುಕೊಳ್ಳಲು ಅರ್ಹರಾಗಿರುವುದಿಲ್ಲ. ಈ ಬಗ್ಗೆ ಮಂಡಲಿಗೆ ಮಾಹಿತಿ ದೊರೆತಲ್ಲಿ ಅಂತಹ ವಿದ್ಯಾರ್ಥಿಗಳ ಪ್ರಮಾಣ ಪತ್ರವನ್ನು ರದ್ದುಗೊಳಿಸುವ ಸಂಪೂರ್ಣ ಅಧಿಕಾರ ಮಂಡಳಿಗೆ ಇದೆ.

**ಯಾರನ್ನು ಸಂಪರ್ಕಿಸಬೇಕು ?**

ಆಸಕ್ತ ಹಾಗೂ ಅರ್ಹ ವಿದ್ಯಾರ್ಥಿಗಳು ಹತ್ತಿರದ ಯಾವುದಾದರೂ ಅಧಿಕೃತ ಪ್ರೌಢಶಾಲೆ ಇಲ್ಲವೇ ಸಂಯುಕ್ತ ಪದವಿಪೂರ್ವ ಕಾಲೇಜುಗಳ ಮುಖ್ಯಸ್ಥರನ್ನು ಸಂಪರ್ಕಿಸಿ ಮಾಹಿತಿ ಪಡೆಯಬಹುದು.

**ಸಲ್ಲಿಸಬೇಕಾದ ದಾಖಲೆಗಳಾವುವು**

1. ಭರ್ತಿಮಾಡಿದ ಖಾಸಗಿ ವಿದ್ಯಾರ್ಥಿಗಳ ನೋಂದಣಿ ಅರ್ಜಿನಮೂನೆ
2. ಜನ್ಮದಿನಾಂಕ ಪ್ರಮಾಣ ಪತ್ರದ ದಾಖಲೆ : ಜನ್ಮದಿನಾಂಕದ ದಾಖಲೆಯಾಗಿ ವಿದ್ಯಾರ್ಥಿಯು ತನ್ನ ಹಿಂದಿನ ಶಾಲಾ ವರ್ಗಾವಣೆ ಪತ್ರ ನೀಡಬಹುದು ರಾಜ್ಯದ ಖಾಸಗಿ ಶಾಲೆಯ ವರ್ಗಾವಣೆ ಪತ್ರವಾಗಿದ್ದಲ್ಲಿ ಸಂಬಂದಿಸಿದ ಕ್ಷೇತ್ರಶಿಕ್ಷಣಾಧಿಕಾರಿಗಳಿಂದ ವರ್ಗಾವಣೆ ಪತ್ರಕ್ಕೆ ಮೇಲುರುಜು ಮಾಡಿಸಿರಬೇಕು. ಹೊರರಾಜ್ಯದ ವರ್ಗಾವಣೆ ಪತ್ರವಾಗಿದ್ದಲ್ಲಿ ಆ ರಾಜ್ಯದ ವಿದ್ಯಾಧಿಕಾರಿಗಳಿಂದ ವರ್ಗಾವಣೆ ಪತ್ರಕ್ಕೆ ಮೇಲುಸಹಿ ಮಾಡಿಸಿರಬೇಕು , ಕೋರ್ಟ ಅಫಿಡವಿಟ್, ಬ್ಯಾಪ್ಟಿಸ್ಮಲ್ ಸರ್ಟಿಫಿಕೇಟ್, ಸರ್ಕಾರಿ ಸೇವೆಯಲ್ಲಿದ್ದಲ್ಲಿ ಸೇವಾ ಪುಸ್ತಕದ ಉದ್ಧರಣೆ,
3. ವಿದ್ಯಾರ್ಥಿಯ ಇತ್ತೀಚಿನ 5 ಕಪ್ಪುಬಿಳುಪು ಇಲ್ಲವೇ ಬಹುವರ್ಣದ ಪಾಸ್‌ಪೋರ್ಟ ಅಳತೆಯ ಭಾವಚಿತ್ರಗಳು.
4. ಪರಿಶಿಷ್ಠ ಜಾತಿ/ ಪರಿಶಿಷ್ಠ ಪಂಗಡ ಇಲ್ಲವೇ ಪ್ರವರ್ಗ–1 ರ ವಿದ್ಯಾರ್ಥಿಗಳು ದೃಢೀಕೃತ ಜಾತಿ ಪ್ರಮಾಣಪತ್ರ ಸಲ್ಲಿಸಬೇಕು.
5. ಎಲ್ಲಾ ವಿದ್ಯಾರ್ಥಿಗಳು ಕಡ್ಡಾಯವಾಗಿ ನಿಗದಿಪಡಿಸಿದ ನೋಂದಣಿ ಶುಲ್ಕವನ್ನು ಹುಂಡಿ ರೂಪದಲ್ಲಿ ಪಾವತಿಸಬೇಕು. ಹುಂಡಿಯನ್ನು **"Secretary,KSEEB,Bangalore"** ಇವರ ಹೆಸರಿಗೆ ಪಡೆದು ಸಲ್ಲಿಸಬೇಕು. ಯಾವುದೇ ವಿದ್ಯಾರ್ಥಿಗಳಿಗೂ ನೋಂದಣಿ ಶುಲ್ಕದಿಂದ ವಿನಾಯಿತಿ ಇರುವುದಿಲ್ಲ.ಆದರೆ ನಿಯಮಾನುಸಾರ ಪ.ಜಾ/ ಪ.ಪಂ/ ಪ್ರವರ್ಗ–1

ರ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕ ವಿನಾಯಿತಿ ಇರುತ್ತದೆ. ಇತರೆ ಹೆಣ್ಣು ಮಕ್ಕಳಿಗೆ ಪರೀಕ್ಷಾ ಶುಲ್ಕ ವಿನಾಯಿತಿ ಇರುವುದಿಲ್ಲ.

6. ಅಂಗವಿಕಲ,ಅಂಧ,ಮೂಗ ಮತ್ತು ಕಿವುಡ ವಿದ್ಯಾರ್ಥಿಗಳಾಗಿದ್ದಲ್ಲಿ ಶಾಲಾ ವಿದ್ಯಾರ್ಥಿಗಳಂತೆ ಇವರು ಪರೀಕ್ಷೆಗೆ ಇರುವ ವಿನಾಯಿತಿ ಹಾಗೂ ಸವಲತ್ತುಗಳನ್ನು ಅಗತ್ಯ ದಾಖಲೆಗಳನ್ನು ಒದಗಿಸಿ ಪಡೆಯಬಹುದು.

## ಖಾಸಗಿ ವಿದ್ಯಾರ್ಥಿಗಳಾಗಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ತೆಗೆದುಕೊಳ್ಳುವುದು ಹೇಗೆ ?

1. ಆಯಾ ಶೈಕ್ಷಣಿಕ ವರ್ಷದ ಮಾರ್ಚ ಒಂದನೇ ತಾರೀಖಿಗೆ ಹದಿನೈದು ವರ್ಷ ಪೂರ್ಣಗೊಳಿಸಿರುವ ಆಸಕ್ತ ವಿದ್ಯಾರ್ಥಿಗಳು ತಮ್ಮ ಹತ್ತಿರದ ಯಾವುದಾದರೂ ಸರ್ಕಾರಿ ಅಥವಾ ಅನುದಾನಿತ ಪ್ರೌಢಶಾಲೆ ಇಲ್ಲವೇ ಸಂಯುಕ್ತ ಪದವಿಪೂರ್ವ ಕಾಲೇಜಿನ ಮುಖ್ಯಸ್ಥರನ್ನು ಸಂಪರ್ಕಿಸಿ, "ಖಾಸಗಿ ವಿದ್ಯಾರ್ಥಿ" ಯಾಗಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯಲು ಬಯಸಿದ್ದು ಖಾಸಗಿ ವಿದ್ಯಾರ್ಥಿಯಾಗಿ ನೊಂದಾಯಿಸಿಕೊಳ್ಳಲು ಮನವಿ ನೀಡಬೇಕು.

2. ಸದರಿ ಶಾಲೆಯ ಮುಖ್ಯಸ್ಥರು ಮಂಡಳಿ ನಿಗದಿಪಡಿಸಿರುವ ಖಾಸಗಿ ವಿದ್ಯಾರ್ಥಿಗಳ ನೊಂದಣಿ ಅರ್ಜಿ ಹಾಗೂ ಅಗತ್ಯ ದಾಖಲೆಗಳನ್ನು ತಿಳಿಸುವರು.

3. ವಿದ್ಯಾರ್ಥಿ ಪೂರ್ಣ ಪ್ರಮಾಣದಲ್ಲಿ ಪ್ರಸ್ತಾವನೆ ನೀಡಿದ ನಂತರ ಸಂಬಂದಿಸಿದ ಉಪನಿರ್ದೇಶಕರ ಕಛೇರಿಗೆ ಪ್ರಸ್ತಾವನೆಯನ್ನು ನಿಗದಿಪಡಿಸಿದ ಸಮಯದೊಳಗೆ ರವಾನಿಸುವರು.

4. ಸಂಬಂದಿಸಿದ ಜಿಲ್ಲಾ ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ಇವರು ನಿಗದಿತ ಸಮಯದೊಳಗೆ ಮಂಡಳಿ ನಿಯಮಗಳನ್ವಯ ದಾಖಲೆಗಳನ್ನು ಪರಿಶೀಲಿಸಿ ನೋಂದಣಿ ಮಾಡಿಕೊಳ್ಳುವರು.

5. ಶಾಲೆಯ ಮುಖ್ಯಶಿಕ್ಷಕರು, ಉಪನಿರ್ದೇಶಕರ ಕಛೇರಿಯಲ್ಲಿ ಖಾಸಗಿವಿದ್ಯಾರ್ಥಿಗಳಾಗಿ ನೋಂದಣಿ ಆದ ವಿದ್ಯಾರ್ಥಿಗಳ ವಿವರಗಳನ್ನು ಖಾಸಗಿ ವಿದ್ಯಾರ್ಥಿಗಳ ದಾಖಲಾತಿ ವಹಿಯಲ್ಲಿ ದಾಖಲಿಸಿಕೊಳ್ಳುವರು. ಆಸಕ್ತ ವಿದ್ಯಾರ್ಥಿಗಳಿಂದ ನಿಗದಿಪಡಿಸಿದ ಪರೀಕ್ಷಾ ಶುಲ್ಕವನ್ನು ಪಡೆದು ಮಂಡಳಿಗೆ ನಾಮಿನಲ್‌ರೋಲ್ ರವಾನಿಸುವರು.

6. ಶಾಲೆಯಿಂದ ಬಂದ ನಾಮಿನಲ್ ರೋಲ್ ಗೆ ಅನುಗುಣವಾಗಿ ಓಎಮ್‌ಆರ್ ಗಳನ್ನು ಮಂಡಳಿಯಿಂದ ವಿತರಿಸಲು ಕ್ರಮವಹಿಸಲಾಗುವುದು.

7. ಖಾಸಗಿ ವಿದ್ಯಾರ್ಥಿಗಳಿಗೆ ಜಿಲ್ಲಾ ಹಂತದಲ್ಲಿ ಪ್ರತ್ಯೇಕ ಪರೀಕ್ಷಾ ಕೇಂದ್ರಗಳನ್ನು ರಚನೆ ಮಾಡಿ ಆ ಜಿಲ್ಲೆಯ ಎಲ್ಲಾ ಶಾಲೆಗಳಿಂದ ನೋಂದಣಿ ಮಾಡಿಕೊಂಡ ವಿದ್ಯಾರ್ಥಿಗಳನ್ನು ಈ ಕೇಂದ್ರಗಳಿಗೆ ಹಂಚಿಕೆ ಮಾಡಲಾಗುವುದು.
8. ಈ ವಿದ್ಯಾರ್ಥಿಗಳು ಪ್ರಥಮ ಪ್ರಯತ್ನದಲ್ಲಿ ಉತ್ತೀರ್ಣರಾಗದಿದ್ದಲ್ಲಿ ನಪಾಸಾದ ವಿಷಯಗಳಿಗೆ ಶಾಲಾ ವಿದ್ಯಾರ್ಥಿಗಳ ರೀತಿಯಲ್ಲಿ ಪ್ರಯತ್ನಗಳಲ್ಲಿ ಪರೀಕ್ಷೆ ಬರೆದು ಉತ್ತೀರ್ಣರಾಗಲು ಅವಕಾಶ ಕಲ್ಪಿಸಿದೆ.
9. ಖಾಸಗಿ ವಿದ್ಯಾರ್ಥಿಗಳು ಉತ್ತೀರ್ಣರಾದ ನಂತರ ಎಲ್ಲಾ ವಿದ್ಯಾರ್ಥಿಗಳ ರೀತಿಯಲ್ಲಿಯೇ ಮುಂದಿನ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವಂತೆ ವರ್ಗಾವಣೆ ಪತ್ರ,ಅಂಕಪಟ್ಟಿ ಹಾಗೂ ಇನ್ನಿತರೆ ಎಲ್ಲಾ ಅಗತ್ಯ ದಾಖಲೆಗಳನ್ನು ಸದರಿ ಶಾಲೆಯಿಂದಲೇ ವಿತರಿಸಲಾಗುತ್ತದೆ.

10. ಖಾಸಗಿ ವಿದ್ಯಾರ್ಥಿಯಾಗಿ ನೋಂದಣಿ ಮಾಡಿಸಿಕೊಂಡ ಸಾಲಿನಲ್ಲಿ ಪ್ರಥಮವಾಗಿ ಪರೀಕ್ಷೆಗೆ ಹಾಜರಾಗದೆ ಇದ್ದಲ್ಲಿ ಅಂತಹ ವಿದ್ಯಾರ್ಥಿಗಳು ಯಾವ ವರ್ಷ ಪರೀಕ್ಷೆಗೆ ಹಾಜರಾಗಲಿಚ್ಛಿಸುತ್ತಾನೋ ಆ ವರ್ಷ ನಿಗದಿಗೊಳಿಸಿದೆ ಶುಲ್ಕ ಪಾವತಿಸಿ ನೋಂದಣಿ ನವೀಕರಣ ಮಾಡಿಸಿಕೊಳ್ಳಬೇಕು.

**ಪೂರಕ ಸಂಪರ್ಕಗಳು;**

ನಮೂನೆಗಳು : ಖಾಸಗಿ ವಿದ್ಯಾರ್ಥಿಗಳ ನೋಂದಣಿ ಅರ್ಜಿ ನಮೂನೆ.
ಸುತ್ತೋಲೆ : ಶುಲ್ಕ ,ಮಾರ್ಗದರ್ಶಿಯ ಪರೀಕ್ಷಾ ವಿನಾಯಿತಿಗಳು ಅಧ್ಯಾಯ, ಸಂಬಂದಿಸಿದ ಸುತ್ತೋಲೆಗಳು.

## ಅನುತ್ತೀರ್ಣ ಅಂಕಪಟ್ಟಿ Fail Marks Card

ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಅನುತ್ತೀರ್ಣ ಅಂಕಪಟ್ಟಿಯನ್ನು ಕೋರಿಕೆಯ ಮೇರೆಗೆ ವಿತರಿಸಲು ಮಂಡಳಿ ಕ್ರಮವಹಿಸುತ್ತದೆ.

## ಅನುತ್ತೀರ್ಣ ಅಂಕಪಟ್ಟಿ ಪಡೆಯಲು ಅರ್ಜಿ ತುಂಬಲು ಸೂಚನೆಗಳು

ಅನುತ್ತೀರ್ಣ ಅಂಕಪಟ್ಟಿ ಪಡೆಯಲು ಅರ್ಜಿ ನಿಗದಿಪಡಿಸಲಾಗಿದೆ. ಇದು ಎಲ್ಲಾ ಅಧಿಕೃತ ಶಾಲೆಗಳಲ್ಲೂ ದೊರೆಯುತ್ತದೆ. ಅರ್ಜಿಗೆ ಯಾವುದೇ ಶುಲ್ಕ ಇರುವುದಿಲ್ಲ.

### ಅರ್ಜಿಯಲ್ಲಿ ವಿದ್ಯಾರ್ಥಿ ಭರ್ತಿ ಮಾಡಬೇಕಾದ ಅಂಕಣ :

**ವಿದ್ಯಾರ್ಥಿಯು ಕೋರುತ್ತಿರುವ ದಾಖಲೆ :** ನೀವು ಯಾವ ದಾಖಲೆಯನ್ನು ಕೋರುತ್ತಿದ್ದೀರಿ ಎಂದು ಸ್ಪಷ್ಟವಾಗಿ ಅರ್ಜಿಯಲ್ಲಿ ಬರೆಯಬೇಕು.

**ಬ್ಯಾಂಕ್ ಹುಂಡಿಯ ವಿವರ** : ನೀವು ಪಡೆದಿರುವ ಬ್ಯಾಂಕ್ ಹುಂಡಿಯ ಸಂಖ್ಯೆ,ದಿನಾಂಕ,ಮೊತ್ತ, ಬ್ಯಾಂಕ್ ಹೆಸರು ಹಾಗೂ ಮೊತ್ತವನ್ನು ಅರ್ಜಿಯಲ್ಲಿ ಬರೆದು ಹುಂಡಿಯ ಹಿಂಬಾಗದಲ್ಲಿ ತಮ್ಮ ಹೆಸರು,ವಿಳಾಸ ಹಾಗೂ ಯಾವ ಉದ್ದೇಶಕ್ಕಾಗಿ ಹುಂಡಿಯನ್ನು ಪಡೆದಿದ್ದೀರಿ ಎಂಬ ಬಗ್ಗೆ ನಮೂದಿಸಬೇಕು

**ವಿದ್ಯಾರ್ಥಿಯ ವಿವರ :** ವಿದ್ಯಾರ್ಥಿಯು ತನ್ನ ಹೆಸರು,ತಂದೆ,ತಾಯಿಯ ಹೆಸರು ,ಜನ್ಮದಿನಾಂಕ,ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಓದಿದ ಭಾಷೆಗಳು ಹಾಗೂ ವಿಷಯಗಳು, ದಾಖಲೆಗಳಲ್ಲಿರುವಂತೆ ಬರೆದು ದಾಖಲೆಪಡೆಯುತ್ತಿರುವ ಉದ್ದೇಶ ಹಾಗೂ ಪೂರ್ಣ ಅಂಚೆ ವಿಳಾಸವನ್ನು ಬರೆದಿರಬೇಕು.

ಅರ್ಜಿ ತುಂಬಿದ ನಂತರ ಮಾಹಿತಿ ಸರಿಯಾಗಿದೆ ಎಂದು ವಿದ್ಯಾರ್ಥಿ ಸಹಿ ಮಾಡಬೇಕು ಇದು ಕಡ್ಡಾಯ

### ಶಾಲೆಯ ಮುಖ್ಯಸ್ಥರು ಭರ್ತಿ ಮಾಡಬೇಕಾದ ಅಂಕಣ ;

**ಸಂಸ್ಥೆಯ ಮುಖ್ಯಸ್ಥರು ನೀಡಬೇಕಾದ ಮಾಹಿತಿ** : ಶಾಲೆಯ ಹೆಸರು, ಶಾಲಾ ಸಂಕೇತ, ವಿದ್ಯಾರ್ಥಿಯ ನೋಂದಣಿಸಂಖ್ಯೆ ಹಾಗೂ ಯಾವ ವರ್ಷ/ಗಳಲ್ಲಿ ಉತ್ತೀರ್ಣ/ಅನುತ್ತೀರ್ಣ ನಾಗಿರುತ್ತಾರೆ ಎಂಬ ಬಗ್ಗೆ ಫಲಿತಾಂಶ ಪಟ್ಟಿಗಳನ್ನು ಪರಿಶೀಲಿಸಿ ಮಾಹಿತಿ ದಾಖಲಿಸಬೇಕು.
ಅರ್ಜಿ ತುಂಬಿದ ನಂತರ ಮಾಹಿತಿ ಸರಿಯಾಗಿದೆ ಎಂದು ಶಾಲೆಯ ಮುಖ್ಯಸ್ಥರು ಸಹಿ ಮಾಡಬೇಕು ಇದು ಕಡ್ಡಾಯ.

**ಶುಲ್ಕ**

ರೂ.100/- ರೂಗಳಿಗೆ ರಾಷ್ಟ್ರೀಕೃತ ಬ್ಯಾಂಕಿನಲ್ಲಿ "Secretary,KSEEB,Bangalore" ಎಂದು ಹುಂಡಿಯನ್ನು ಪಡೆದು ಅರ್ಜಿ ಜೊತೆಗೆ ಸಲ್ಲಿಸಬೇಕು. Bangalore Payable ಹುಂಡಿಯಾಗಿರಬೇಕು. ಅತಿ ತುರ್ತಾಗಿ **ಅನುತ್ತೀರ್ಣ ಅಂಕಪಟ್ಟಿ** ಪಡೆಯಬೇಕಾದಲ್ಲಿ ವಿಶೇಷ ಪ್ರಕರಣದಡಿ ರೂ.200/- ಶುಲ್ಕ ಪಾವತಿಸಬೇಕು.

### ಅರ್ಜಿ ಎಲ್ಲಿಗೆ ಸಲ್ಲಿಸುವುದು

1. ಪ್ರಸ್ತುತ ವರ್ಷದಲ್ಲಿ ವಿದ್ಯಾರ್ಥಿ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಅನುತ್ತೀರ್ಣನಾಗಿದ್ದರೆ :
   ಪ್ರಸ್ತುತ ವರ್ಷದಲ್ಲಿ ವಿದ್ಯಾರ್ಥಿ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಅನುತ್ತೀರ್ಣನಾಗಿದ್ದು ಆ ವರ್ಷದಲ್ಲಿಯೇ ನವೆಂಬರ್ ತಿಂಗಳೊಳಗೆ **ಅನುತ್ತೀರ್ಣ ಅಂಕಪಟ್ಟಿ** ಪಡೆಯಲು

ಬಯಸಿದಲ್ಲಿ, ವಿದ್ಯಾರ್ಥಿಯು ಎಸ್.ಎಸ್.ಎಲ್.ಸಿ ವಿದ್ಯಾಭ್ಯಾಸ ಮಾಡಿದ ಶಾಲೆಯ ಮುಖ್ಯಶಿಕ್ಷಕರ ಮೂಲಕ ಅರ್ಜಿಯನ್ನು ಅಗತ್ಯ ದಾಖಲೆಗಳೊಂದಿಗೆ ಪರೀಕ್ಷಾಮಂಡಳಿಯ ಕೇಂದ್ರ ಕಛೇರಿಗೆ ಕಳುಹಿಸಬೇಕು. ಇಲ್ಲವಾದಲ್ಲಿ ಅರ್ಜಿಯನ್ನು ವಿಭಾಗೀಯ ಪರೀಕ್ಷಾ ಮಂಡಳಿಗೆ ಸಲ್ಲಿಸಬೇಕು.

2. **1963 ಹಾಗೂ ಹಿಂದಿನವರ್ಷಗಳಲ್ಲಿ ವಿದ್ಯಾರ್ಥಿ ಎಸ್ಎಸ್ಎಲ್ಸಿ ಪರೀಕ್ಷೆಯಲ್ಲಿ ಅನುತ್ತೀರ್ಣನಾಗಿದ್ದರೆ**
   1963 ಹಾಗೂ ಹಿಂದಿನವರ್ಷಗಳಲ್ಲಿ ವಿದ್ಯಾರ್ಥಿ ಎಸ್ಎಸ್ಎಲ್ಸಿ ಪರೀಕ್ಷೆಯಲ್ಲಿ ಅನುತ್ತೀರ್ಣನಾಗಿದ್ದು **ಅನುತ್ತೀರ್ಣ ಅಂಕಪಟ್ಟಿ** ಪಡೆಯಲು ಬಯಸಿದಲ್ಲಿ ಅಂತಹ ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ ವಿದ್ಯಾಭ್ಯಾಸ ಮಾಡಿದ ಶಾಲೆಯ ಮುಖ್ಯಶಿಕ್ಷಕರ ಮೂಲಕ ಅರ್ಜಿಯನ್ನು ಅಗತ್ಯ ದಾಖಲೆಗಳೊಂದಿಗೆ ಪರೀಕ್ಷಾಮಂಡಳಿಯ ಕೇಂದ್ರ ಕಛೇರಿಗೆ ಕಳುಹಿಸಬೇಕು.

3. **1963 ರ ನಂತರದ ವರ್ಷಗಳಲ್ಲಿ ವಿದ್ಯಾರ್ಥಿ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಅನುತ್ತೀರ್ಣನಾಗಿದ್ದರೆ:**
   1963 ರ ನಂತರದ ವರ್ಷಗಳಲ್ಲಿ ವಿದ್ಯಾರ್ಥಿ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಅನುತ್ತೀರ್ಣನಾಗಿದ್ದು **ಅನುತ್ತೀರ್ಣ ಅಂಕಪಟ್ಟಿ** ಪಡೆಯಲು ಬಯಸಿದಲ್ಲಿ ವಿದ್ಯಾರ್ಥಿಯು ಎಸ್.ಎಸ್.ಎಲ್.ಸಿ ವಿದ್ಯಾಭ್ಯಾಸ ಮಾಡಿದ ಶಾಲೆಯ ಮುಖ್ಯಶಿಕ್ಷಕರ ಮೂಲಕ ಅರ್ಜಿಯನ್ನು ಅಗತ್ಯ ದಾಖಲೆಗಳೊಂದಿಗೆ ಸಂಬಂಧಿಸಿದ ವಿಭಾಗೀಯ ಪರೀಕ್ಷಾಮಂಡಳಿಗೆ ಕಳುಹಿಸಿ ಪಡೆದುಕೊಳ್ಳಬಹುದು.

**ಸೇವೆ ನೀಡಲು ಕಾಲ ಮಿತಿ**

1. ಸಾಮಾನ್ಯ ಪ್ರಕರಗಳಿಗೆ 30 ದಿನಗಳು.
2. ವಿಶೇಷ ಪ್ರಕರಣಗಳಿಗೆ 5 ದಿನಗಳು.

**: ಅನುತ್ತೀರ್ಣ ಅಂಕಪಟ್ಟಿ ಯನ್ನು ರವಾನಿಸುವ ಬಗೆ :**

ತುರ್ತು ಅಂಚೆ ಮೂಲಕ ಶಾಲೆಗೆ ರವಾನಿಸಲಾಗುವುದು. ಶಾಲೆಯ ಮುಖ್ಯಶಿಕ್ಷಕರಿಂದ ವಿದ್ಯಾರ್ಥಿಯು **ಅನುತ್ತೀರ್ಣ ಅಂಕಪಟ್ಟಿ** ಪಡೆದುಕೊಳ್ಳಬೇಕು. ಯಾವುದೇ ಕಾರಣಕ್ಕೂ ವಿದ್ಯಾರ್ಥಿಗೆ **ಅನುತ್ತೀರ್ಣ ಅಂಕಪಟ್ಟಿಯನ್ನು** ನೇರವಾಗಿ ಮಂಡಳಿಯಿಂದ ವಿತರಿಸಲಾಗುವುದಿಲ್ಲ.